# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮವಿ/ಪವಿ/ಸಿ.ಆರ್.01/ಯುಜಿ/2021–22/ಇ.29

ಕುಲಸಚಿವ (ಪರೀಕ್ಷಾಂಗ)ರ ಕಛೇರಿ,
ಮಂಗಳಗಂಗೋತ್ರಿ – 574 199.
ದಿನಾಂಕ: 16.08.2022

## ಪರೀಕ್ಷಾ ಪ್ರಕಟಣೆ

ವಿಷಯ: 2021–22ರ ದೂರಶಿಕ್ಷಣ ಕಾರ್ಯಕ್ರಮಗಳ ಬಿ.ಎ. ಬಿ.ಕಾಂ ಹಾಗೂ ಬಿ.ಬಿ.ಎಂ/ಬಿ.ಬಿ.ಎ ಪದವಿ ಕೋರ್ಸುಗಳಿಗೆ ಪರೀಕ್ಷೆಗಳನ್ನು ನಡೆಸುವ ಕುರಿತು.

-----

ಮಂಗಳೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣದ ಕಾರ್ಯಕ್ರಮಗಳ ಬಿ.ಎ. ಬಿ.ಕಾಂ ಹಾಗೂ ಬಿ.ಬಿ.ಎಂ/ಬಿ.ಬಿ.ಎ ಪದವಿಗಳ ಪ್ರಥಮ ಮತ್ತು ದ್ವಿತೀಯ ವರ್ಷದ ಪುನರಾವರ್ತಿತ ಹಾಗೂ ಅಂತಿಮ ವರ್ಷದ ಆವರ್ತಿತ ಮತ್ತು ಪುನರಾವರ್ತಿತ ವಾರ್ಷಿಕ ಪರೀಕ್ಷೆಗಳು ದಿನಾಂಕ **10.10.2022** ರಿಂದ ಪ್ರಾರಂಭಗೊಳ್ಳುವುದು.

## ಪರೀಕ್ಷಾ ಕೇಂದ್ರಗಳು

| ಮಂಗಳೂರು | ಪುತ್ತೂರು (ದ.ಕ) | ಉಡುಪಿ | ಕೊಡಗು |
|---|---|---|---|
| ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು | ಪರೀಕ್ಷಾ ಕೇಂದ್ರದ ವಿವರವನ್ನು ನಂತರ ತಿಳಿಸಲಾಗುವುದು | | ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ, ಕೊಡಗು |

ಪರೀಕ್ಷೆಗೆ ಅರ್ಹರಾದ ವಿದ್ಯಾರ್ಥಿಗಳು ಮೇಲಿನ ಪರೀಕ್ಷಾ ಕೇಂದ್ರಗಳಲ್ಲಿ ಒಂದು ಕೇಂದ್ರವನ್ನು ಆಯ್ಕೆ ಮಾಡಿ ಪರೀಕ್ಷಾ ಶುಲ್ಕವನ್ನು ಡಿ.ಡಿ ಯಾ ಚಲನ್ ಮೂಲಕ ಪಾವತಿಸಿ ವಿಶ್ವವಿದ್ಯಾನಿಲಯ ಒದಗಿಸಿದ **ಕಂಪ್ಯೂಟರೀಕೃತ ಅರ್ಜಿಗಳನ್ನು** ಭರ್ತಿ ಮಾಡಿ ಈ ಕೆಳಗಿನ ಯಾವುದಾದರೂ ಒಂದು ವಿಳಾಸಕ್ಕೆ ದಿನಾಂಕ **15.09.2022** ರೊಳಗಾಗಿ ಅಂಚೆ ಅಥವಾ ಮುದ್ದಾಂ ತಲುಪಿಸುವಂತೆ ತಿಳಿಸಲಾಗಿದೆ.

1) ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
2) ಸಂಯೋಜಕರು, ಮಂಗಳೂರು.ವಿ.ವಿ ದೂರ ಶಿಕ್ಷಣ ಕಾರ್ಯಕ್ರಮ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು
3) ಸಂಯೋಜಕರು, ಮಂಗಳೂರು.ವಿ.ವಿ ದೂರ ಶಿಕ್ಷಣ ಕಾರ್ಯಕ್ರಮ, ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ತೆಂಕನಿಡಿಯೂರು, ಉಡುಪಿ
4) ಸಂಯೋಜಕರು ಮಂಗಳೂರು.ವಿ.ವಿ ದೂರ ಶಿಕ್ಷಣ ಕಾರ್ಯಕ್ರಮ ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ, ಕೊಡಗು

**ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:**

1. **29.08.2022** : ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (ದಂಡ ಶುಲ್ಕವಿಲ್ಲದೆ)
2. **30.08.2022 ರಿಂದ 05.09.2022 ರವರೆಗೆ** : ದಂಡಶುಲ್ಕ ದಿನವೊಂದಕ್ಕೆ ರೂ. 55/– ರಂತೆ
3. **06.09.2022 ರಿಂದ 12.09.2022 ರವರೆಗೆ** : ದಂಡಶುಲ್ಕ ದಿನವೊಂದಕ್ಕೆ ರೂ. 110/– ರಂತೆ

***ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ದರಗಳು:***

| | | |
|---|---|---|
| **ಪೂರ್ಣ ಪರೀಕ್ಷೆಗೆ** | : | **ರೂ. 1120.00** |
| **ಅರ್ಜಿ ಶುಲ್ಕ** | : | **ರೂ. 120.00** |
| **ಅಂಕಪಟ್ಟಿ ಶುಲ್ಕ** | : | **ರೂ. 230.00** |
| **ಒಟ್ಟು ಶುಲ್ಕ** | : | **ರೂ. 1470.00** |
| **ವಿಷಯವೊಂದಕ್ಕೆ (ಪುನರಾವರ್ತಿತ ವಿದ್ಯಾರ್ಥಿಗಳು)** | : | **ರೂ. 200.00** |

**ಸೂಚನೆ: ಅಂತಿಮ ದಿನಾಂಕ 12.09.2022ರ ನಂತರ ಶುಲ್ಕ ಪಾವತಿಸಿ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.**

ದಕ್ಷಿಣ ಕನ್ನಡ / ಉಡುಪಿ / ಕೊಡಗು ಜಿಲ್ಲೆಯ ವಿದ್ಯಾರ್ಥಿಗಳು ಈ ಕೆಳಕಂಡ ಬ್ಯಾಂಕ್ ಶಾಖೆಗಳಲ್ಲಿ ಪರೀಕ್ಷಾ ಅರ್ಜಿಯೊಂದಿಗಿರುವ ಚಲನ್ ಉಪಯೋಗಿಸಿ, "ದೂರಶಿಕ್ಷಣ ನಿರ್ದೇಶನ ಕೇಂದ್ರ–06, ಪರೀಕ್ಷಾ ಶುಲ್ಕ" ಈ ಲೆಕ್ಕ ಶೀರ್ಷಿಕೆಗೆ ಪರೀಕ್ಷಾ ಶುಲ್ಕವನ್ನು ಪಾವತಿಸುವುದು. ಇತರೇ ಹೊರ ಜಿಲ್ಲೆಗಳ ವಿದ್ಯಾರ್ಥಿಗಳು ಡಿ.ಡಿ.ಯನ್ನು The Finance Officer, Mangalore University, Mangalagangotri ಇವರ ಹೆಸರಿಗೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಪಡೆದು

ಪಾವತಿಸುವುದು. ಪರೀಕ್ಷಾ ಅರ್ಜಿಯಲ್ಲಿ ನೋಂದಣಿ ಸಂಖ್ಯೆ, ಪರೀಕ್ಷಾ ಕೇಂದ್ರದ ಹೆಸರು ಹಾಗೂ ಚಲನ್ ಮೇಲೆ ನೋಂದಣಿ ಸಂಖ್ಯೆಯನ್ನು ಬರೆದು ಚಲನಿನ ನಾಲ್ಕನೇ ಮೂಲ ಪ್ರತಿಯನ್ನು ಪರೀಕ್ಷಾ ಅರ್ಜಿಯೊಂದಿಗೆ ಲಗತ್ತಿಸುವುದು.

| ದಕ್ಷಿಣ ಕನ್ನಡ | ಉಡುಪಿ | ಕೊಡಗು |
|---|---|---|
| **1) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಗಳಗಂಗೋತ್ರಿ/ ಮೈನ್ ಬ್ರಾಂಚ್, ಮಂಗಳೂರು/ಶ್ರೀಕ್ಷೇತ್ರ ಕಾಂಪ್ಲೆಕ್ಸ್, ಬೆಳ್ತಂಗಡಿ./ ಜನತಾ ಬಜಾರ್ ಕಟ್ಟಡ, ಮಂಗಳೂರು.<br>2) ವಿಜಯ ಬ್ಯಾಂಕ್, ಮಂಗಳಗಂಗೋತ್ರಿ/ಬೆಳ್ಳಾರೆ<br>3) ಕೆನರಾ ಬ್ಯಾಂಕ್, ಬಲ್ಮಠ<br>4) ಸಿಂಡಿಕೇಟ್ ಬ್ಯಾಂಕ್, ಕೊಡಿಯಾಲ್‌ಬೈಲ್ / ಸುರತ್ಕಲ್/ ನೂರ್‌ಕಾಂಪ್ಲೆಕ್ಸ್, ಮುಲ್ಕಿ/ಮೂಡಬಿದ್ರೆ<br>5) ಕಾರ್ಪೋರೇಷನ್ ಬ್ಯಾಂಕ್, ಕಾರ್‌ಸ್ಟ್ರೀಟ್, ಬಂಟ್ವಾಳ/ ಜಿ.ಎಲ್.ಕಾಂಪ್ಲೆಕ್ಸ್, ಮೈನ್ ರೋಡ್, ಪುತ್ತೂರು** | **ಸಿಂಡಿಕೇಟ್ ಬ್ಯಾಂಕ್, ಕುಂಜಿಬೆಟ್ಟು/ ಬ್ರಹ್ಮಾವರ / ವೊಡೇರ್‌ಹೊಬ್ಳಿ/ ಕಾರ್ಕಳ** | **1) ಕೆನರಾ ಬ್ಯಾಂಕ್, ಮಡಿಕೇರಿ<br>2) ವಿಜಯ ಬ್ಯಾಂಕ್, ವಿರಾಜಪೇಟೆ / ಸೋಮವಾರಪೇಟೆ** |

## ವಿದ್ಯಾರ್ಥಿಗಳು ಗಮನಿಸಬೇಕಾದ ಸೂಚನೆಗಳು

01. ಪ್ರತಿಯೊಬ್ಬ ಅಭ್ಯರ್ಥಿಯೂ ಮೇಲೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.120/– ಅರ್ಜಿ ಶುಲ್ಕ ಮತ್ತು ರೂ. 230/– ಅಂಕಪಟ್ಟಿ ಶುಲ್ಕವನ್ನು ಪಾವತಿಮಾಡತಕ್ಕದ್ದು.
02. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು
03. ವಿದೇಶೀ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕದ ಮೂರು ಪಟ್ಟು ಶುಲ್ಕವನ್ನು ಪಾವತಿಮಾಡತಕ್ಕದ್ದು.
04. ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗಲಿರುವ ಅಭ್ಯರ್ಥಿಗಳು ಎಲ್ಲಾ ವಿಷಯಗಳಲ್ಲಿ ಮತ್ತು ಪತ್ರಿಕೆಗಳಿಗೆ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು.
05. ಒಮ್ಮೆ ಪಾವತಿಸಿದ ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣದಿಂದಲೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
06. ಕನ್ನಡ ಮಾಧ್ಯಮದಲ್ಲಿ ಉತ್ತರಿಸಬಯಸುವ ವಿದ್ಯಾರ್ಥಿಗಳು ಈ ಕೋರಿಕೆಯನ್ನು ಪರೀಕ್ಷಾ ಅರ್ಜಿಯಲ್ಲಿ ನಮೂದಿಸಬೇಕು.
07. ಪರೀಕ್ಷಾ ಪ್ರವೇಶ ಪತ್ರವನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ರವಾನಿಸಲಾಗುವುದಿಲ್ಲ. ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಎರಡು ದಿನ ಮುಂಚಿತವಾಗಿ ಅಭ್ಯರ್ಥಿಗಳು ಅವರವರ ಪರೀಕ್ಷಾ ಕೇಂದ್ರಗಳಲ್ಲಿ ತಮ್ಮ ಗುರುತಿನ ಕಾರ್ಡುಗಳನ್ನು ಹಾಜರುಪಡಿಸಿ ಪ್ರವೇಶ ಪತ್ರವನ್ನು ಪಡೆಯಬೇಕು. ಪರೀಕ್ಷೆಯು ನಡೆಯುತ್ತಿರುವ ಸಂದರ್ಭಗಳಲ್ಲಿ ವಿದ್ಯಾರ್ಥಿಯು ಗುರುತಿನ ಕಾರ್ಡನ್ನು ಕಡ್ಡಾಯವಾಗಿ ಹೊಂದಿರಲೇಬೇಕು. ಇಲ್ಲವಾದರೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ.
08. ಪರೀಕ್ಷಾ ಅರ್ಜಿಯನ್ನು ಕಳುಹಿಸುವ ಮೊದಲು ಅರ್ಜಿಯ ಎಲ್ಲಾ ಅಂಕಣಗಳನ್ನು ಪೂರ್ಣವಾಗಿ/ಸರಿಯಾಗಿ ಭರ್ತಿ ಮಾಡಿದೆಯೇ ಎಂದು ಖಾತರಿಪಡಿಸಿಕೊಳ್ಳಬೇಕು. ಮೂಲ ಚಲನ್ ಪ್ರತಿಯನ್ನು ಅಡಕಗೊಳಿಸಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಂಡು ಕಳುಹಿಸಿಕೊಡಬೇಕು. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ಸಂಬಂಧವಾಗಿ ಯಾವುದೇ ಪತ್ರ ವ್ಯವಹಾರಕ್ಕೂ ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗೆ ಅರ್ಜಿಯ ಹಿಂದೆ ಮುದ್ರಿಸಿರುವ ವಿವರವನ್ನು ಪರಿಶೀಲಿಸಿಕೊಳ್ಳತಕ್ಕದ್ದು.
09. ಪರೀಕ್ಷಾ ಶುಲ್ಕದ ಹಣವನ್ನು ಚೆಕ್ಕುಗಳು, ಮನಿಯಾರ್ಡರ್ ಅಥವಾ ಬ್ಯಾಂಕ್ ಡ್ರಾಫ್ಟ್‌ಗಳ ಮೂಲಕ ಕಳುಹಿಸಿದರೆ ಅವುಗಳನ್ನು ಅಂಗೀಕರಿಸಲಾಗುವುದಿಲ್ಲ.
10. ವಿಶ್ವವಿದ್ಯಾನಿಲಯದ ಕಾನೂನು ಮತ್ತು ನಿಯಮ–ನಿಬಂಧನೆಗಳ ಪ್ರಕಾರ ಯಾವುದೇ ಅಭ್ಯರ್ಥಿ ಪರೀಕ್ಷೆ ತೆಗೆದುಕೊಳ್ಳಲು ಅನರ್ಹರಾಗಿದ್ದ ಪಕ್ಷದಲ್ಲಿ, ಕೇವಲ ಪರೀಕ್ಷಾ ಶುಲ್ಕ ಸಂದಾಯ ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಿದ ಮಾತ್ರಕ್ಕೆ ಆ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳುವ ಹಕ್ಕು ಇರುವುದಿಲ್ಲ. ಪರೀಕ್ಷಾ ಶುಲ್ಕ ಪಾವತಿಸದೇ ಪರೀಕ್ಷಾ ಕೇಂದ್ರದಲ್ಲಿ ತಪ್ಪು ಮಾಹಿತಿ ನೀಡಿ ಪರೀಕ್ಷೆ ಬರೆದರೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ ಹಾಗೂ ಅಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.
11. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಮತ್ತು ಇತರ ಮೀಸಲಾತಿ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳೂ ಸಹ ಈ ಮೇಲೆ ನಮೂದಿಸಿರುವ ಪರೀಕ್ಷಾ ಶುಲ್ಕವನ್ನು ಪೂರ್ಣವಾಗಿ ಪಾವತಿಸಬೇಕು.

www.mulinx.net/MuLinx/Set up.exe ಗೆ sign-up ಆಗಿ ಆನ್‌ಲೈನ್ ಮೂಲಕ ದಿನಾಂಕ **14.09.2022** ರ ಒಳಗಾಗಿ ಅಪ್‌ಲೋಡ್ ಮಾಡಿ ಕ್ರೋಢೀಕರಿಸಿದ ಅಭ್ಯರ್ಥನಾ ಪಟ್ಟಿಯನ್ನು ಈ ಕಛೇರಿಗೆ ದಿನಾಂಕ **16.09.2022** ರೊಳಗಾಗಿ ಕಳುಹಿಸಿಕೊಡತಕ್ಕದ್ದು.

**ವಿ.ಸೂ: ಸ್ವೀಕೃತಿಯಾದಂತಹ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ/ಪುನರ್ ಪರಿಶೀಲಿಸಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲ ತಾಣದಲ್ಲಿ ನೀಡಲಾದ ಪರೀಕ್ಷಾ ಗಣಕೀಕರಣ ಸಂಬಂಧಿತ ಲಿಂಕ್ ಐಡಿ : www.mulinx.net/MuLinx/Setup.exe ಗೆ sign-up ಆಗಿ ಕಡ್ಡಾಯವಾಗಿ Online ಮೂಲಕ ವಿವರಗಳನ್ನು ಅಪ್‌ಲೋಡ್ ಮಾಡತಕ್ಕದ್ದು,**

16/08/2022

ಕುಲಸಚಿವರು (ಪರೀಕ್ಷಾಂಗ)

ರಿಗೆ:

ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ. 574 199

ಪ್ರತಿ:,

01. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು 575 001
02. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು, ಉಡುಪಿ 576 106
03. ಪ್ರಾಂಶುಪಾಲರು, ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ 571 201

} ದೂರಶಿಕ್ಷಣ ಅಧ್ಯಯನ ಕೇಂದ್ರಗಳು

04. ಕುಲಸಚಿವರು/ಹಣಕಾಸು ಅಧಿಕಾರಿಯವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
05. ವಿಶೇಷಾಧಿಕಾರಿ (ಪರೀಕ್ಷಾಂಗ)/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ.
06. ಮಾನ್ಯ ಕುಲಪತಿಯವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ.
07. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು ವಲಯ.
08. ಅಧೀಕ್ಷಕರು ಎಸ್.1, ಎಸ್.2, ಎಸ್.3, ಎಸ್.4. ಎಸ್.5, ಎಸ್.6.
09. ಸಿಸ್ಟಂ ಅನಾಲಿಸ್ಟ್ ಆ್ಯಂಡ್ ಪ್ರೋಗ್ರಾಮರ್, ಕುಲಸಚಿವರು (ಪರೀಕ್ಷಾಂಗ)ರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ.
10. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
11. ಇ.9/ಇ.10/ಇ.11/ ಕಾರ್ಯನಿರ್ವಾಹಕರು.